

بسم اللهِ الرّحمٰن الرّحيم

# ಕ್ಷಮಾಶೀಲನೂ ಕಾರುಣ್ಯವಂತನೂ ಆದ ನಮ್ಮ ಅಲ್ಲಾಹನು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **18-07-14** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನವನ್ನು ತಿಲಾವತ್ ಮಾಡಿದರು:

قُلْ يَاعِبَادِيَ الَّذِينَ أَسْرَفُوا عَلَى أَنْفُسِهِمْ لاَ تَقْنَطُوا مِنْ رَحْمَةِ اللَّهِ إِنَّ اللَّهَ يَغْفِرُ الذُّنُوبَ جَمِيعًا إِنَّهُ هُوَ الْغَفُورُ الرَّحِيمُ

وَأَنِيبُوا إِلَى رَبِّكُمْ وَأَسْلِمُوا لَهُ مِنْ قَبْلِ أَنْ يَأْتِيَكُمُ الْعَذَابُ ثُمَّ لاَ تُنْصَرُونَ

*ಖುಲ್ ಯಾ ಇಬಾದಿಯಲ್ಲಝೀನ ಅಸ್‌ರಫೂ ಅಲಾ ಅನ್‌ಫುಸಿಹಿಮ್ ಲಾ ತಖ್‌ನತೂ ಮಿನ್ ರಹ್ಮತಿಲ್ಲಾಹ್ ಇನ್ನಲ್ಲಾಹ ಯಗ್‌ಫಿರು ಝುನೂಬ ಜಮೀಅನ್ ಇನ್ನಹೂ ಹೂವಲ್ ಗಫೂರುರ್ರಹೀಮ್. ವ ಅನೀಬೂ ಇಲಾ ರಬ್ಬಿಕುಮ್ ವ ಅಸ್‌ಲಿಮೂ ಲಹೂ ಮಿನ್ ಖಬ್‌ಲಿ ಅನ್ ಯಅ್‌ತಿಯಕುಮುಲ್ ಅಝಾಬು ಸುಮ್ಮಾ ಲಾ ತುನ್‌ಸರೂನ್.*

**"ನೀನು ಹೇಳು: ತಮ್ಮ ಸ್ವಂತ ಆತ್ಮಕ್ಕೆ ದ್ರೋಹವೆಸಗಿದ ನನ್ನ ದಾಸರೇ, ಅಲ್ಲಾಹನ ಕೃಪೆಯ ಬಗ್ಗೆ ನೀವು ನಿರಾಶರಾಗಬೇಡಿರಿ. ಖಂಡಿತವಾಗಿಯೂ ಅಲ್ಲಾಹನು ನಿಮ್ಮ ಎಲ್ಲಾ ಅಪರಾಧಗಳನ್ನೂ ಕ್ಷಮಿಸುವನು. ನಿಶ್ಚಯವಾಗಿಯೂ ಅವನು ಅತ್ಯಂತ ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ. ಶಿಕ್ಷೆ ಬಂದೆರಗುವುದಕ್ಕಿಂತ ಮುಂಚಿತವಾಗಿ ನಿಮ್ಮ ಪ್ರಭುವಿನ ಕಡೆಗೆ ಮರಳಿರಿ ಮತ್ತು ಅವನಿಗೆ ಶರಣಾಗಿ ಜೀವಿಸಿರಿ. (ಶಿಕ್ಷೆ ಬಂದೆರಗಿದರೆ) ಆ ಬಳಿಕ ನಿಮಗೆ ಸಹಾಯ ಸಿಗಲಾರದು."** (ಪವಿತ್ರ ಖುರ್‌ಆನ್ 39:54,55)

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ವಿವಿಧ ವಿಷಯಗಳನ್ನು ಪ್ರಸ್ತಾಪಿಸುವಾಗ ವಿವಿಧ ದಾಸರಿಗೆ ತಾನು ಅಪರಿಮಿತವಾಗಿ ಕ್ಷಮಿಸುವವನೂ ಅಪರಿಮಿತವಾಗಿ ಕಾರುಣ್ಯದೋರುವವನೂ ಆಗಿರುವುದಾಗಿ ಭರವಸೆ ನೀಡಿದ್ದಾನೆ. ನಾನು ತಿಲಾವತ್ ಮಾಡಿದ ಎರಡು ವಚನಗಳ ಮೊದಲನೆಯ ವಚನದಲ್ಲಿ ಇದೇ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಪಾಪಕೃತ್ಯಗಳನ್ನು ಮಾಡಿದ ಕಾರಣ ಅಲ್ಲಾಹನ ಶಿಕ್ಷೆಯನ್ನು ಭಯಪಡುತ್ತಿರುವ ಪ್ರತಿಯೊಬ್ಬ ಮನುಷ್ಯನಿಗೆ ಈ ವಚನದಲ್ಲಿ ಅತಿ ಸುಂದರವಾದ ಒಂದು ಸಂದೇಶವಿದೆ. ಅಲ್ಲಾಹನ ಕಾರುಣ್ಯಕ್ಕೆ ಪಾತ್ರನಾಗಲು ಮತ್ತು ಕ್ಷಮೆಯನ್ನು ಗಳಿಸಿ ಅಲ್ಲಾಹನ ಅನುಗ್ರಹವನ್ನು ಪಡೆಯಲು ಸಾಧ್ಯವೆಂಬ ಒಂದು ಸುಂದರ ಸಂದೇಶ ಈ ವಚನದಲ್ಲಿದೆ. ಅಲ್ಲಾಹನು ಹೇಳುತ್ತಾನೆ: ನನ್ನ ದಾಸರೇ, ನನ್ನ ಕಾರುಣ್ಯ ಗಳಿಸುವ ಬಗ್ಗೆ ನಿರಾಶರಾಗಬೇಡಿರಿ. ನಾನು ಪ್ರಭುವಾಗಿದ್ದೇನೆ. ನಿಮ್ಮ ಪಾಪಗಳನ್ನು ಕ್ಷಮಿಸುವ ಅಧಿಕಾರ ನನಗಿದೆ. ನಾನು ನಿಮ್ಮನ್ನು ನನ್ನ ಕಾರುಣ್ಯದ ಚಾದರದಿಂದ ಹೊದಿಸಬಲ್ಲೆನು.

ನೋಡಿರಿ, ಇದೆಷ್ಟು ಸುಂದರ ಸಂದೇಶವಾಗಿದೆ. ಅದು ಶುಭ ಪ್ರತೀಕ್ಷೆಯನ್ನು ವರ್ಧಿಸುತ್ತದೆ. ಹಾಗೂ ನಿರಾಶೆಗಳನ್ನು ಕೊನೆಗೊಳಿಸುತ್ತದೆ. ಈ ಸಂದೇಶವು ಮನುಷ್ಯರೊಂದಿಗೆ, ನಿರಾಶೆ ಪಾಪದೋಷ ಉಂಟುಮಾಡುವುದೆಂದು ಹೇಳುತ್ತದೆ. ಈ ಸಂದೇಶ ನಮ್ಮನ್ನು ಬಲಹೀನತೆಗಳಿಂದ ರಕ್ಷಿಸುವ ಕಡೆಗೆ ಒಯ್ಯುತ್ತದೆ. ಈ ಸಂದೇಶವು ನಮ್ಮನ್ನು ಜೀವಿತದ ಪರಾಭವಗಳಿಂದ ದೂರಸರಿಸುವಂತಹದಾಗಿದೆ. ಏಕೆಂದರೆ ನಿರಾಶೆಗಳೇ ಪಾಪಗಳನ್ನು ಮಾಡಲು ಮತ್ತು ಜೀವನದಲ್ಲಿ ಪರಾಭವಗೊಳ್ಳಲು ಕೆಲವು ಸಾರಿ ಕಾರಣಗಳಾಗುತ್ತವೆ. ಆದರೆ ಯಾರು ಅಲ್ಲಾಹನ ಕಾರಣ್ಯದ ಕೆಳಗೆ ಬರುತ್ತಾನೋ ಅವನಿಂದ ನಿರಾಶೆಗಳೂ ಸೋಲುಗಳೂ ದೂರ ಓಡಿ ಹೋಗುತ್ತವೆ. ಈ ಸಂದೇಶ ನಮ್ಮನ್ನು ಅಲ್ಲಾಹನ ಆಜ್ಞೆಗಳ ಪ್ರಕಾರ ವರ್ತಿಸಲು, ಅಲ್ಲಾಹನನ್ನು ಪ್ರೀತಿಸಲು ಮಾರ್ಗದರ್ಶನ ನೀಡುತ್ತದೆ. ನಾವು ಅಲ್ಲಾಹನ ಸಾಮೀಪ್ಯವನ್ನು ಗಳಿಸುತ್ತಾ ಮುಂದೆ ಸಾಗಿ ಅವನ ಕಾರುಣ್ಯದ ಅನುಗ್ರಹ ಗಳಿಸುವವರಾಗಿ ಮುಂದುವರಿಯಲು ಅದು ಮಾರ್ಗದರ್ಶನ ನೀಡುತ್ತದೆ. ದಾರಿ ತಪ್ಪಿದ ಎಲ್ಲಾ ಜನರಿಗೆ ಈ ಸಂದೇಶ ಒಂದು ಪ್ರಕಾಶ ನೀಡುವ ಮಾರ್ಗವಾಗಿದೆ. ಆಧ್ಯಾತ್ಮಿಕವಾಗಿ ಮೃತರಾದ ಎಲ್ಲರಿಗೂ ಇದರಲ್ಲಿ ಜೀವದಾಯಕ ಸಂದೇಶವಿದೆ. ಶೈತಾನನ ಹಿಡಿತಕ್ಕೊಳಗಾದವರಿಗೆ ಸ್ವಾತಂತ್ರ್ಯದ ಶುಭವಾರ್ತೆ ಈ ಸಂದೇಶದಲ್ಲಿದೆ. ನಮ್ಮ ಅಲ್ಲಾಹನು ಎಷ್ಟು ಪ್ರಿಯಕರನಾಗಿದ್ದಾನೆ. ಅವನು ತನ್ನ ಪ್ರೀತಿಯನ್ನು ಹೇಗೆ ಪ್ರಕಟಿಸುತ್ತಾನೆಂದರೆ ಅವನು ಪದೇ ಪದೇ ತನ್ನನ್ನು ನಂಬುವವರೊಂದಿಗೆ ಹೇಳುತ್ತಾನೆ. وَلاَ تَيْئَسُوا مِنْ رَوْحِ اللَّهِ *ವಲಾ ತಯ್‌ಅಸೂ ಮಿನ್ ರೌಹಿಲ್ಲಾಹಿ* – **ಅಲ್ಲಾಹನ ಕರುಣೆ ಬಗ್ಗೆ ನೀವು ನಿರಾಶೆ ಹೊಂದಬೇಡಿರಿ**. ಏಕೆಂದರೆ لاَ يَيْئَسُ مِنْ رَوْحِ اللَّهِ إِلاَّ الْقَوْمُ الْكَافِرُونَ *ಲಾ ಯಯ್‌ಅಸು ಮಿನ್ ರೌಹಿಲ್ಲಾಹಿ ಇಲ್ಲಲ್‌ಖೌಮುಲ್ ಕಾಫಿರೂನ್* – **ಅವಿಶ್ವಾಸಿಗಳಾದ ಜನರು ಹೊರತು ಬೇರೆ ಯಾರೂ ಅಲ್ಲಾಹನ ಕಾರುಣ್ಯದ ಕುರಿತು ನಿರಾಶೆ ಪಡಲಾರರು** (ಪವಿತ್ರ ಖುರ್‌ಆನ್ 12:88). ಆದುದರಿಂದ ನೀವು ಸತ್ಯವಿಶ್ವಾಸಿಗಳೆಂದು ವಾದಿಸುವುದಾದರೆ ಅಲ್ಲಾಹನ ಕಾರುಣ್ಯ ಮತ್ತು ಕ್ಷಮೆಯ ಬಗ್ಗೆ ಎಲ್ಲಾ ಸಮಯಗಳಲ್ಲೂ ಶುಭ ಪ್ರತೀಕ್ಷೆ ಹೊಂದಿರಿ. ನೀವು ನಿಮ್ಮ ಮನುಷ್ಯ ಸಹಜ ಬಲಹೀನತೆಗಳ ಕಾರಣ ಕೆಲವು ಕೆಡುಕುಗಳಲ್ಲಿ ಸಿಲುಕಿರಬಹುದು. ಆದರೆ ನೀವು ದಾರಿ ತಪ್ಪಿದ

ಅವಿಶ್ವಾಸಿಗಳಾಗಿಲ್ಲ. ಅವಿಶ್ವಾಸಿಗಳು ಮಾತ್ರ ನಿರಾಶೆ ಹೊಂದಿದವರಾಗುತ್ತಾರೆ. ಅವರಿಗೆ ಅಲ್ಲಾಹನ ಅಸ್ತಿತ್ವದ ಬಗ್ಗೆ ದೃಢ ವಿಶ್ವಾಸವಿಲ್ಲ. ಅಲ್ಲಾಹನ ಕಾರುಣ್ಯದ ಬಗ್ಗೆ ವಿಶ್ವಾಸವಿಲ್ಲ. ಇದು ದಾರಿ ತಪ್ಪಿದ ಅವಿಶ್ವಾಸಿಗಳ ಗುಣವಾಗಿದೆ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: وَمَنْ يَقْنَطُ مِنْ رَحْمَةِ رَبِّهِ إِلاَّ الضَّالُّونَ *ವ ಮನ್ ಯಖ್‌ನತು ಮಿನ್ ರಹ್ಮತಿ ರಬ್ಬಿಹೀ ಇಲ್ಲಝ್ಝಾಲ್ಲೂನ್* – **"ಪಥಭ್ರಷ್ಟರು ಹೊರತು ನಿನ್ನ ಪ್ರಭುವಿನ ಕರುಣೆಯ ಬಗ್ಗೆ ಬೇರೆ ಯಾರು ನಿರಾಶೆ ಹೊಂದುವರು."** (ಪವಿತ್ರ ಖುರ್‌ಆನ್ 15: 57)

ಒಟ್ಟಿನಲ್ಲಿ, ಗಾಬರಿಗೊಂಡಿರುವವರಿಗೆ ಮತ್ತು ತಮ್ಮ ಸ್ಥಿತಿಯ ಬಗ್ಗೆ ಆತಂಕಗೊಂಡಿರುವವರಿಗೆ ಇದಕ್ಕಿಂತ ಹೆಚ್ಚು ಸಹಾನುಭೂತಿ ಸೂಚಿಸಿ ಹೃದಯಕ್ಕೆ ಸಾಂತ್ವನ ನೀಡುವ ಸಂದೇಶ ಬೇರೆ ಯಾವುದಿದೆ? ನಮ್ಮ ದೇವನಾದ ಅಲ್ಲಾಹನು ನಮಗೆ ಸಾಂತ್ವನ ನೀಡುತ್ತಾ ಮತ್ತೂ ಹೀಗೆ ಸಹ ಹೇಳುತ್ತಾನೆ. ನಿಮ್ಮ ಕೆಟ್ಟ ಕೆಲಸಗಳ ಕಾರಣದಿಂದ ನಿಮ್ಮನ್ನು ತಕ್ಷಣ ಹಿಡಿಗೂಡಿ ಅವನು ಶಿಕ್ಷಿಸುವುದಿಲ್ಲ. **ವ ರಬ್ಬಿಕಲ್ ಗಫೂರು ಝುರ್ರಹ್ಮತಿ** – ಅಂದರೆ **"ನಿನ್ನ ಪ್ರಭು ಬಹಳ ಕ್ಷಮಿಸುವವನೂ ಬಹಳ ಕಾರುಣ್ಯದಾಯಕನೂ ಆಗಿದ್ದಾನೆ."**

ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ. **ಕತಬ ರಬ್ಬುಕುಮ್ ಅಲಾ ನಫ್‌ಸಿಹಿರ್ರಹ್ಮತ** – **"ನಿಮ್ಮ ಪ್ರಭು ನಿಮಗೆ ಕಾರುಣ್ಯದೋರುವುದನ್ನು ತನ್ನ ಮೇಲೆ ಕಡ್ಡಾಯವಾಗಿ ಮಾಡಿದ್ದಾನೆ."**

ಕೆಲವು ದಿನಗಳ ಹಿಂದೆ ಡೆನ್‌ಮಾರ್ಕ್ ದೇಶದ ಒಂದು ಧಾರ್ಮಿಕ ಪತ್ರಿಕೆಯಲ್ಲಿ ಒಬ್ಬ ಮಹಿಳೆ ಪವಿತ್ರ ಖುರ್‌ಆನ್ ಬಗ್ಗೆ ಹೀಗೆ ಬರೆದರು: "ಈ ಗ್ರಂಥದಲ್ಲಿ ಪದೇ ಪದೇ ಶಿಕ್ಷೆಯ ಬಗ್ಗೆ ಪ್ರಸ್ತಾಪಗಳು ಕಾಣಿಸುತ್ತವೆ. ಪ್ರೀತಿ ಎಂಬ ಶಬ್ದವನ್ನು ಬಳಸಿರುವುದು ಒಂದೆರಡು ಸಾರಿ ಮಾತ್ರ. ದೇವನನ್ನು ನಂಬುವುದು ಮನುಷ್ಯನು ತನ್ನ ಇಷ್ಟ ಪ್ರಕಾರ ಸ್ವತಂತ್ರನಾಗಿ ಮತ್ತು ದೇವನ ಬಗ್ಗೆ ಪ್ರೀತಿ ಹೊಂದಿರುವ ಕಾರಣದಿಂದಾಗಿದೆ. ಆದರೆ ಮುಸ್ಲಿಮರಿಗೆ ಸಂಬಂಧಿಸಿ ಹೀಗೆ ಹೇಳಲು ಖಂಡಿತ ಸಾಧ್ಯವಿಲ್ಲ"

ಈ ಲೇಖಕಿ ಪವಿತ್ರ ಖುರ್‌ಆನಿನ ಕೆಲವು ವಚನಗಳನ್ನು ಅವುಗಳು ಅವತೀರ್ಣವಾದ ಸಂದರ್ಭವನ್ನು ಸೂಚಿಸದೆ ಬರೆದು ಮತ್ತು ಅವುಗಳಿಗೆ ತಪ್ಪು ವ್ಯಾಖ್ಯಾನ ನೀಡಿ, ಇಸ್ಲಾಮ್ ಧರ್ಮ ಪ್ರತಿಪಾದಿಸುವ ದೇವನು ಶೀಘ್ರವಾಗಿ ಶಿಕ್ಷಿಸುವವನೂ ಕಠೋರನೂ ಆಗಿರುವನು ಎಂದು ಸಾಬೀತುಗೊಳಿಸಲು ಪ್ರಯತ್ನ ಮಾಡಿದ್ದಾರೆ. ಈ ಲೇಖನಕ್ಕೆ ಉತ್ತರವನ್ನು ಅಲ್ಲಿನ ನಮ್ಮ ಜಮಾಅತ್ ನೀಡುವುದು. ನಾನು ನಿಮ್ಮ ಮುಂದೆ ಇರಿಸಿದ ಪವಿತ್ರ ಖುರ್‌ಆನಿನ ವಚನಗಳು ಸತ್ಯವಿಶ್ವಾಸಿಗಳಿಗೆ ಶುಭಪ್ರತೀಕ್ಷೆ ನೀಡುವವುಗಳಾಗಿವೆ. ಮಾತ್ರವಲ್ಲ ಮೇಲೆ ಸೂಚಿಸಿದಂತಹ ಬರಹಗಾರರಿಗೆ ಮತ್ತು ಇಸ್ಲಾಮಿನ ಶತ್ರುಗಳಿಗೆ ಇಸ್ಲಾಮಿನ ಬಗ್ಗೆ ಸುಳ್ಳು ಆರೋಪ ಮಾಡಿ ಇಸ್ಲಾಮ್ ಮತ್ತು ಪವಿತ್ರ ಖುರ್‌ಆನ್ ಬಗ್ಗೆ ದ್ವೇಷ ಪ್ರಕಟಿಸುವವರಿಗೆ ಉತ್ತರ ಸಹ ನೀಡುತ್ತವೆ.

ಅಲ್ಲಾಹನು ಮಾಲಿಕನಾಗಿದ್ದಾನೆ. ಅವನು ಕ್ಷಮಿಸುತ್ತಾನೆ ಎಂಬ ಅಲ್ಲಾಹನ ವಿಶೇಷ ಗುಣವು ಅವನ ಎಲ್ಲಾ ಗುಣಗಳ ಮೇಲೆ ಆವರಿಸಿದೆ. ಅವನು ಕ್ಷಮಿಸುತ್ತಾನೆ ಮತ್ತು ಕರುಣೆ ದೋರುತ್ತಾನೆ. ಮನುಷ್ಯನು ಅನೇಕ ಸಲ ಕೆಟ್ಟ ಕೆಲಸಗಳನ್ನು ಮಾಡುತ್ತಾ ಇದ್ದರೂ ದೌರ್ಜನ್ಯ ಮಾಡುತ್ತಾ ಇದ್ದರೂ ಅವನನ್ನು ತಕ್ಷಣ ಶಿಕ್ಷಿಸುವುದಿಲ್ಲ ಎನ್ನುವುದು ಅಲ್ಲಾಹನ ಅತ್ಯಂತವಾದ ಕಾರುಣ್ಯದ ಒಂದು ಗುಣವಾಗಿದೆ.

ಆದರೆ, ಮಿತಿಮೀರಿದ ದೌರ್ಜನ್ಯ ಮತ್ತು ಪಾಪಗಳನ್ನು ಮಾಡುವವರನ್ನು ಮತ್ತು ಅವುಗಳನ್ನು ಬಿಡದೆ ಮುಂದುವರಿಸುತ್ತಾ ಹೋಗುವವರನ್ನು ಅಲ್ಲಾಹನು ಶಿಕ್ಷಿಸುವುದಾಗಿ ನಿಶ್ಚಯವಾಗಿಯೂ ಹೇಳಿರುವನು. ನಿರಂತರವಾಗಿ ದೌರ್ಜನ್ಯ ಮತ್ತು ಪಾಪ ಕೃತ್ಯಗಳನ್ನು ನೀವು ಮಾಡುವುದಾದರೆ ಮತ್ತು ನೀವು ಅವುಗಳಿಂದ ಹಿಂದೆ ಸರಿಯದಿದ್ದರೆ ಖಂಡಿತವಾಗಿಯೂ ನಿಮಗೆ ಶಿಕ್ಷೆ ಸಿಗುವುದು ಎಂದು ಅಲ್ಲಾಹನು ಹೇಳಿದ್ದಾನೆ. ಇದು ಪ್ರಕೃತಿ ನಿಯಮವಾಗಿದೆ. ಲೌಕಿಕ ನಿಯಮಗಳು ಸಹ ಇದನ್ನು ಅನುಮೋದಿಸುತ್ತದೆ.

ಅಲ್ಲಾಹನು ಎಷ್ಟು ಅಪರಿಮಿತ ದಯಾವಂತನಾಗಿದ್ದಾನೆಂದರೆ ಒಂದು ಕಾಲ ಬರುವುದು ಆಗ ನರಕವು ಅದರಲ್ಲಿ ಜನರಿಲ್ಲದೆ ಬರಿದಾಗುವುದು. ಅಲ್ಲಾಹನ ಕರುಣೆ ವಿಶಾಲವೂ ಅಪರಿಮಿತವೂ ಆಗಿರುತ್ತದೆ. ನಾನು ತಿಲಾವತ್ ಮಾಡಿದ ಪವಿತ್ರ ಖುರ್‌ಆನ್ ವಚನಗಳಲ್ಲಿ ಅಲ್ಲಾಹನು ತನ್ನ ಕರುಣೆ ಮತ್ತು ಕ್ಷಮೆಯ ಬಗ್ಗೆ ಪ್ರಸ್ತಾಪಿಸಿದ ನಂತರ ಹೇಳುತ್ತಾನೆ– **ನೀವು ನನ್ನ ಕರುಣೆ ಮತ್ತು ಕ್ಷಮೆಯ ಲಾಭ ಪಡೆಯುವುದಿಲ್ಲವಾದರೆ ನಿಮ್ಮ ಪಾಪ ಕೃತ್ಯಗಳಿಗೆ ಮತ್ತು ದೌರ್ಜನ್ಯಗಳಿಗೆ ಶಿಕ್ಷೆ ಲಭಿಸುವುದು** ಎಂದು. ನನ್ನ ಕರುಣೆ ಮತ್ತು ನನ್ನ ಕ್ಷಮಾಗುಣ ನಿಮಗೆ ಪದೇ ಪದೇ ಉಪದೇಶಿಸುತ್ತದೆ– ನೀವು ಆ ಕೆಡುಕುಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ ಎಂದು. ನಿಮ್ಮನ್ನು ಯಾವುದಾದರೂ ಶಿಕ್ಷೆ ಸುತ್ತುವರಿಯುವ ಮೊದಲು ನೀವು ನಿಮ್ಮನ್ನು ರಕ್ಷಿಸಿಕೊಳ್ಳಿರಿ. ನೀವು ಮಿತಿಮೀರಿ ದೌರ್ಜನ್ಯ ಮಾಡಿ ನನ್ನ ಹಿಡಿತಕ್ಕೆ ಪಾತ್ರರಾಗಬೇಡಿರಿ. ನೀವು ನಿಮ್ಮನ್ನು ರಕ್ಷಿಸಲು ಪ್ರಯತ್ನಿಸಿರಿ ಎಂದು ಅಲ್ಲಾಹನು ಹೇಳುತ್ತಾನೆ.

ಪವಿತ್ರ ಖುರ್‌ಆನಿನ ಇಂತಹ ಉಪದೇಶಗಳ ಬಗ್ಗೆ ಆಕ್ಷೇಪಿಸುವವರ ಕುರಿತು ಅವರ ಬುದ್ಧಿ ಕುರುಡಾಗಿದೆ ಎಂದೂ ಅವರು ದ್ವೇಷಾಸೂಯೆ ಭರಿತರಾಗಿದ್ದಾರೆ ಎಂದೂ ಅಲ್ಲದೆ ಬೇರೇನು ಹೇಳಲು ಸಾಧ್ಯ. ಈ ಜನರು ತಮ್ಮ ದೇಶಗಳ ನಿಯಮಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ನೀಡಲು ಬಯಸುತ್ತಾರೆ. ಆದರೆ ದೇವನ ನಿಯಮಗಳನ್ನು ಉಲ್ಲಂಘಿಸುವವರಿಗೆ ಮತ್ತು ದೌರ್ಜನ್ಯಗಳಲ್ಲಿ ಮಿತಿ ಮೀರುವವರಿಗೆ ಶಿಕ್ಷೆ ನೀಡುವುದಾಗಿ ಅಲ್ಲಾಹನು ಏಕೆ ಹೇಳುತ್ತಾನೆಂದು ಕೇಳುತ್ತಾರೆ.

ಒಂದು ಹದೀಸು ಹೀಗಿದೆ. ಹಝ್ರತ್ ಅಬೂಝರ್ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು: "ಅಲ್ಲಾಹನು ಹೀಗೆ ಹೇಳುತ್ತಾನೆ– ಓ ಆದಮ್ ಪುತ್ರ, ನೀನು ಪ್ರಾರ್ಥಿಸುತ್ತಿಲ್ಲವಾದರೂ ನೀನು ನನ್ನ ಬಗ್ಗೆ ಭರವಸೆ ಹೊಂದಿರುವೆ. ಆದುದರಿಂದ ನೀನು ಬಹುದೇವಾರಾಧನೆ ಮಾಡುವುದಿಲ್ಲವಾದರೆ ನಾನು ನಿನ್ನ ಪಾಪಗಳನ್ನು ಕ್ಷಮಿಸುವೆನು. ನಿನ್ನ ಪಾಪಗಳು ಭೂಮಿಯಷ್ಟಾಗಿದ್ದರೂ ನಾನು ನಿನಗೆ ಭೂಮಿಯಷ್ಟು ಕ್ಷಮೆಯನ್ನು ನೀಡುವೆನು. ನೀನು ಆಕಾಶದ ಉನ್ನತಿಯ ತನಕ ಪಾಪಗಳನ್ನು ಮಾಡಿದ್ದರೂ ನೀನು ನನ್ನಿಂದ ಕ್ಷಮೆಯನ್ನು ಬೇಡಿಕೊಂಡರೆ ನಾನು ಆ ಪಾಪಗಳೆಲ್ಲಾ ಕ್ಷಮಿಸುವೆನು. ನಾನು ಒಂದಿಷ್ಟು ಸಹ ಅದರ ಬಗ್ಗೆ ಲಕ್ಷ್ಯ ನೀಡಲಿಕ್ಕಿಲ್ಲ"

ಇಸ್ಲಾಮ್ ಧರ್ಮ ಪ್ರತಿಪಾದಿಸುವ ಅಲ್ಲಾಹನು ಕ್ಷಮೆ ನೀಡುವ ದೇವನಾಗಿದ್ದಾನೆ. ಸತ್ಯ ವಿಶ್ವಾಸಿಗಳಾದ ನಮಗೆ ಅಲ್ಲಾಹನು ಎಷ್ಟು ದೊಡ್ಡ ಅನುಗ್ರಹಗಳನ್ನು ನೀಡುತ್ತಾನೆಂದರೆ ಅವನು ನೀಡುವ ಅನುಗ್ರಹಗಳಲ್ಲಿ ಒಂದು, ರಮಝಾನ್ ತಿಂಗಳಲ್ಲಿ ಕ್ಷಮೆ ನೀಡುವ ಅವನ ಬಾಗಿಲುಗಳು ಹೆಚ್ಚು ವಿಶಾಲವಾಗಿ ತೆರೆಯಲ್ಪಡುತ್ತವೆ. ರಮಝಾನ್ ತಿಂಗಳಲ್ಲಿ ಅಲ್ಲಾಹನ ಕ್ಷಮೆ ಮತ್ತು ಕರುಣೆಯ ಬಗ್ಗೆ ಇನ್ನೊಂದು ಹದೀಸು ಹೀಗಿದೆ.

ನಝರ್ ಬಿನ್ ಶಅಬಾನ್ ಹೇಳುತ್ತಾರೆ: ನಾನು ಅಬೂಸಲ್ಮ ಬಿನ್ ಅಬ್ದುರ್ರಹ್ಮಾನ್‌ರೊಂದಿಗೆ ಹೇಳಿದೆ. ನೀವು ನಿಮ್ಮ ತಂದೆಯವರಿಂದ ಆಲಿಸಿದ ರಮಝಾನಿಗೆ ಸಂಬಂಧಿಸಿದ ಯಾವುದಾದರೂ ವಿಷಯದ ಬಗ್ಗೆ ಹೇಳಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಂದ ಅವರು ನೇರವಾಗಿ ಆಲಿಸಿದ ರಮಝಾನಿಗೆ ಸಂಬಂಧಿಸಿದ ವಿಷಯ ಹೇಳಿರಿ. ಅಬೂಸಲ್ಮ ಬಿನ್ ಅಬ್ದುರ್ರಹ್ಮಾನ್ ಹೇಳಿದರು, ನನ್ನೊಂದಿಗೆ ನನ್ನ ತಂದೆಯವರು ಹೇಳಿದ್ದಾರೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೀಗೆ ಹೇಳಿರುವರು– "**ಅಲ್ಲಾಹನು ರಮಝಾನ್ ತಿಂಗಳಲ್ಲಿ ಉಪವಾಸ ಅನುಷ್ಠಿಸುವುದನ್ನು ನಿಮಗೆ ಕಡ್ಡಾಯಗೊಳಿಸಿರುವನು. ಈ ತಿಂಗಳಲ್ಲಿ ರಾತ್ರಿಯ ನಮಾಝ್ ನಾನು ಜಾರಿಗೊಳಿಸಿರುವೆನು. ಯಾರು ಸತ್ಯ ವಿಶ್ವಾಸದೊಂದಿಗೆ ಹಾಗೂ ಅಲ್ಲಾಹನಿಂದ ಪ್ರತಿಫಲ ಗಳಿಸುವ ಸಂಕಲ್ಪದಿಂದ ಉಪವಾಸ ಅನುಷ್ಠಿಸುತ್ತಾನೋ ಅವನು ಪಾಪದಿಂದ ಹೇಗೆ ಹೊರಗೆ ಬರುತ್ತಾನೆಂದರೆ ಅವನ ತಾಯಿ ಅವನಿಗೆ ಜನ್ಮ ನೀಡಿದ ಸ್ಥಿತಿಯ ಹಾಗೆ. ನವಜಾತ ಶಿಶುವಿನ ಹಾಗೆ ಅವನಾಗುತ್ತಾನೆ.**"

ಅಜ್ಞಾನಿಗಳಾದ ಜನರಿಗೆ ಇಸ್ಲಾಮ್ ಪ್ರತಿಪಾದಿಸುವ ದೇವನು ಹೇಗೆ ಕಾಣಿಸುತ್ತಾನೆ ಎಂಬುದನ್ನು ತಿಳಿಯಲು ನಮಗೆ ಆಶಕ್ತಿ ಇಲ್ಲ. ಆದರೆ ನಮ್ಮ ದೇವನಾದ ಅಲ್ಲಾಹನು ನಮ್ಮ ತಂದೆ ತಾಯಂದಿರಿಗಿಂತ ಮಿಗಿಲಾಗಿ ನಮ್ಮನ್ನು ಪ್ರೀತಿಸುತ್ತಾನೆಂದು ನಮಗೆ ತಿಳಿದಿದೆ. ಅವನು ಕ್ಷಮಿಸುವವನೂ ನಮ್ಮ ಪಾಪಗಳನ್ನು ಕ್ಷಮಿಸಲು ನಮ್ಮ ಬಳಿಗೆ ಓಡಿ ಬರುವವನೂ ಆಗಿದ್ದಾನೆ.

ರಮಝಾನಿಗೆ ಸಂಬಂಧಿಸಿ ಇನ್ನೊಂದು ಹದೀಸು ರಮಝಾನ್ ಉಪವಾಸಗಳ ಅನುಗ್ರಹದ ಬಗ್ಗೆ ಹೇಳುತ್ತದೆ. ಸಲ್ಮಾನ್[ರ] ವರದಿ ಮಾಡುತ್ತಾರೆ: ಶಅಬಾನ್ ತಿಂಗಳ ಕೊನೆಯ ದಿನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನಮ್ಮನ್ನು ಸಂಬೋಧಿಸಿ ಹೇಳಿದರು– "**ಅತ್ಯಂತ ಅನುಗ್ರಹದಾಯಕವಾದ ಒಂದು ತಿಂಗಳು ಪ್ರಾರಂಭವಾಗಲಿದೆ. ಅದರಲ್ಲಿ ವಿಶಿಷ್ಟವಾದ ಒಂದು ರಾತ್ರಿಯಿದೆ. ಅದು ಎಷ್ಟು ಮಹತ್ವ ಪೂರ್ಣವಾಗಿದೆ ಎಂದರೆ ಸಾವಿರ ತಿಂಗಳಿಗಿಂತ ಅದು ಉತ್ತಮವಾಗಿದೆ. ಅಲ್ಲಾಹನು ಈ ತಿಂಗಳಲ್ಲಿ ಉಪವಾಸ ಅನುಷ್ಠಿಸುವುದನ್ನು ಕಡ್ಡಾಯಗೊಳಿಸಿದ್ದಾನೆ. ಹಾಗೂ ಈ ತಿಂಗಳಲ್ಲಿ ರಾತ್ರಿ ನಫಲ್ ನಮಾಝ್ ಮಾಡುವುದನ್ನು ನಿಮಗೆ ಐಚ್ಛಿಕಗೊಳಿಸಿದ್ದಾನೆ.**"

**ಹೂವ ಶಹ್‌ರುನ್ ಅವ್ವಲುಹೂ ರಹ್ಮತುನ್, ವ ಅವ್‌ಸತುಹೂ ಮಗ್‌ಫಿರತುನ್, ವ ಆಖಿರುಹೂ ಇತ್‌ಖುನ್ ಮಿನನ್ನಾರ್ –** "ಅದು ಎಂತಹ ತಿಂಗಳೆಂದರೆ ಅದರ ಪ್ರಾರಂಭದ ಹತ್ತು ದಿನ ಕಾರುಣ್ಯವಾಗಿದೆ. ಮಧ್ಯದ ಹತ್ತು ದಿನ ಕ್ಷಮೆ ಲಭಿಸುವಂತಹದಾಗಿದೆ. ಕೊನೆಯ ಹತ್ತು ದಿನ ನರಕಾಗ್ನಿಯಿಂದ ರಕ್ಷಣೆ ನೀಡುವುದಾಗಿದೆ."

"ಈ ರಮಝಾನ್ ತಿಂಗಳಲ್ಲಿ ಯಾರಾದರೂ ಉಪವಾಸ ಅನುಷ್ಠಿಸುವ ಒಬ್ಬನಿಗೆ ಇಫ್ತಾರ್ ಕಾಲದಲ್ಲಿ ಪಾನಿಯ ಕುಡಿಸಿ ದಾಹ ಶಮನ ಮಾಡಿದರೆ ಅಲ್ಲಾಹನು ಅವನಿಗೆ ನನ್ನ ಕೊಳದಿಂದ ಎಂತಹ ಪಾನೀಯ ಕುಡಿಸುವನೆಂದರೆ ಅವನು ಸ್ವರ್ಗಕ್ಕೆ ಪ್ರವೇಶಿಸುವ ಮೊದಲು ಅವನಿಗೆ ಬಾಯಾರಿಕೆ ಆಗಲಾರದು." ಅವನಿಗೆ ಎಂತಹ ಕ್ಷಮೆ ದೊರಕುವುದೆಂದರೆ ಹಿಂದೆ ಮಾಡಿದ ಪಾಪಗಳು ಕ್ಷಮಿಸಲ್ಪಡುವುವು. ಮತ್ತು ಮುಂದೆ ಪಾಪ ಕೃತ್ಯಗಳನ್ನು ಮಾಡದಿರಲು ಶಕ್ತಿ ದೊರಕುವುದು. ಆದುದರಿಂದ ರಮಝಾನಿನ ಕರ್ತವ್ಯಗಳನ್ನು ಈಡೇರಿಸುತ್ತಾ ಉಪವಾಸ ಅನುಷ್ಠಿಸಬೇಕು ಮತ್ತು ನಫಲ್ ನಮಾಝ್ ಮಾಡುತ್ತಾ ಇರಬೇಕು ಮತ್ತು ಅಲ್ಲಾಹನ ಆರಾಧನೆ ನಿಷ್ಠೆಯಿಂದ ಮಾಡಬೇಕು.

ಒಟ್ಟಿನಲ್ಲಿ, ಅಲ್ಲಾಹನು ನಮ್ಮ ಹೆಜ್ಜೆ ಹೆಜ್ಜೆಗಳಲ್ಲೂ ಎಂತಹ ಅನುಕೂಲತೆಗಳನ್ನು ಒದಗಿಸುತ್ತಾನೆಂದರೆ ಅವು ನಮ್ಮನ್ನು ಸ್ವರ್ಗಕ್ಕೆ ಒಯ್ಯುವವುಗಳಾಗಿವೆ. ಈಗ ನಾವು ರಮಝಾನ್ ತಿಂಗಳಲ್ಲಿದ್ದೇವೆ. ದ್ವಿತೀಯ ಹತ್ತು ದಿನ ಸಹ ಇಂದು ಮುಕ್ತಾಯವಾಗಲಿದೆ. ಮೂರನೆಯ ಹತ್ತು ದಿನ ಪ್ರಾರಂಭವಾಗಲಿದೆ. ರಮಝಾನಿನ ಈ ಕೊನೆಯ ಹತ್ತು ದಿನಗಳು ಹೇಗೆ ಅನುಗ್ರಹಭರಿತವಾಗಿದೆ ಎಂದರೆ ಈ ಹತ್ತು ದಿನಗಳಲ್ಲಿ **'ಲೈಲತುಲ್ ಖದ್ರ್'** ಎಂಬ ಒಂದು ಮಹತ್ವಪೂರ್ಣ ರಾತ್ರಿ ಇದೆ. ಅದು ಪ್ರಾರ್ಥನೆಗಳ ಅಂಗೀಕಾರದ ಮತ್ತು ದೇವನ ಸಾಮೀಪ್ಯ ಒದಗಿಸುವ ದೃಶ್ಯವನ್ನು ಕಾಣಿಸುವ ಮತ್ತು ಕಾಣುವ ರಾತ್ರಿಯಾಗಿದೆ.

ಆದುದರಿಂದ ಈ ಹತ್ತು ದಿನಗಳಲ್ಲಿ ನಾವು ನಮ್ಮ ಪ್ರಾರ್ಥನೆಗಳನ್ನು ವರ್ಧಿಸಲು ವಿಶಿಷ್ಟವಾಗಿ ಪ್ರಯತ್ನಿಸಬೇಕಾಗಿದೆ. ಈ ಸಂದರ್ಭದಲ್ಲಿ ದೊರಕಿದ ಅನುಗ್ರಹಗಳನ್ನು ತಮ್ಮ ಜೀವಿತದ ಭಾಗವನ್ನಾಗಿ ಮಾಡಿಕೊಳ್ಳುವುದು ಸಹ ಆವಶ್ಯಕವಾಗಿದೆ.

ನಿಸ್ಸಂಶಯವಾಗಿಯೂ ಅಲ್ಲಾಹನ ಕಾರುಣ್ಯ ಬಹಳ ವಿಶಾಲವಾಗಿದೆ. ನಿಸ್ಸಂಶಯವಾಗಿಯೂ ರಮಝಾನ್ ತಿಂಗಳಲ್ಲಿ ಮಾಡುವ ಸತ್ಕರ್ಮಗಳಿಗೆ ಬಹಳ ಹೆಚ್ಚು ಪಟ್ಟು ಪುಣ್ಯ ಲಭಿಸುವುದಾಗಿದೆ. ನಿಸ್ಸಂಶಯವಾಗಿ ರಮಝಾನ್ ಕಾರುಣ್ಯ ಮತ್ತು ಕ್ಷಮೆಯನ್ನು ಅಲ್ಲಾಹನಿಂದ ಗಳಿಸುವ ಮತ್ತು ನರಕದಿಂದ ದೂರ ಸರಿಸುವಂತಹ ತಿಂಗಳಾಗಿದೆ. ಆದರೆ ಇವುಗಳಿಂದ ಸ್ಥಿರವಾಗಿ ಲಾಭಪಡೆಯಬೇಕಾದರೆ ಅವುಗಳನ್ನು ಗಳಿಸುವ ಬಗ್ಗೆ ನಿಷ್ಠಾವಂತರಾಗಿ ಪ್ರಯತ್ನ ಮಾಡುವವರಾಗಬೇಕು.

ರಮಝಾನ್ ತಿಂಗಳನ್ನು ಕಾರಣ್ಯ ಮತ್ತು ಕ್ಷಮೆ ಗಳಿಸಲು ಮತ್ತು ನರಕದಿಂದ ದೂರ ಸರಿಯುವ ಮಾರ್ಗವನ್ನಾಗಿ ಮಾಡಿಕೊಳ್ಳುವವರು ಅದೃಷ್ಟಶಾಲಿಗಳಾಗಿದ್ದಾರೆ. ಅವರು ತಮ್ಮ ಬಲಹೀನತೆಗಳನ್ನು ಕೊನೆಗೊಳಿಸುವವರು ಮತ್ತು ಪಾಪಕೃತ್ಯಗಳಿಂದ ಯಾವಾಗಲೂ ತಮ್ಮನ್ನು ರಕ್ಷಿಸಿಕೊಳ್ಳುವವರಾಗುತ್ತಾರೆ. ಈ ರಮಝಾನ್ ತಿಂಗಳು ಎಂತಹ ಮೈಲುಗಲ್ಲು ಆಗಬೇಕೆಂದರೆ ಅದು ನಮ್ಮನ್ನು ಯಾವಾಗಲೂ ಕೆಡುಕಿನಿಂದ ದೂರ ಸರಿಸುವ ಮತ್ತು ಯಾವಾಗಲೂ ಒಳಿತಿನ ಕಡೆಗೆ ಕೊಂಡೊಯ್ಯುವಂತಹದಾಗಲಿ. ಕೆಟ್ಟ ಕೆಲಸಗಳ ಬಗ್ಗೆ ನಮ್ಮ ಹೃದಯಗಳಲ್ಲಿ ಎಂತಹ ಜಿಗುಪ್ಸೆ ತಲೆದೋರಬೇಕೆಂದರೆ ನಾವು ಆ ಕೆಟ್ಟ ಕೆಲಸಗಳ ಬಗ್ಗೆ ಮುಂದೆ ಎಂದೂ ಒಲವು ತೋರಿಸುವವರಾಗದಿರಲಿ. ಸತ್ಯವಾಗಿ ಪಶ್ಚಾತ್ತಾಪ ಪಟ್ಟು ಕ್ಷಮೆ ಯಾಚಿಸುವ ಬಗ್ಗೆ ನಾವು ಲಕ್ಷ್ಯ ನೀಡಬೇಕು. ಅದು ಎಂತಹ **'ತೌಬ'** ಆಗಬೇಕೆಂದರೆ ಅದು ನಮ್ಮನ್ನು ಅಲ್ಲಾಹನ ಸಾಮೀಪ್ಯವನ್ನು ಯಾವಾಗಲೂ ಒದಗಿಸಿ ಕೊಡುವ ಮಾರ್ಗವಾಗಲಿ. ಇವುಗಳನ್ನು ಹೇಗೆ ಗಳಿಸುವುದು ಮತ್ತು ಸತ್ಯವಾದ **'ತೌಬ'** ಹೇಗಿರಬೇಕು, ಅದು ಯಾವಾಗಲೂ ಪಾಪಗಳಿಂದ ದೂರ ಸರಿಸುವಂತೆ ಮಾಡುವುದು ಹೇಗೆ, ಎನ್ನುವುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

"ತೌಬ, ಉತ್ತಮ ನೈತಿಕ ಗುಣಗಳನ್ನು ಗಳಿಸಲು ಉತ್ತೇಜನ ನೀಡುತ್ತದೆ. (ಉನ್ನತ ಸ್ವಭಾವ ಗುಣಗಳನ್ನು ಮತ್ತು ಉತ್ತಮ ಕೃತ್ಯಗಳನ್ನು ಮಾಡಲು ಮತ್ತು ಅಲ್ಲಾಹನ ಸಾಮೀಪ್ಯ ಗಳಿಸಲು **'ತೌಬ'** ಉಪಯೋಗಕರವಾಗಿದೆ. ಇದರಿಂದ ಮನುಷ್ಯನ ಅಭಿವೃದ್ಧಿಗೆ ಸಹಾಯ ಲಭಿಸುತ್ತದೆ.) **'ತೌಬ'** ಮನುಷ್ಯನನ್ನು ಪರಿಪೂರ್ಣನನ್ನಾಗಿ ಮಾಡುತ್ತವೆ. **ತೌಬ**ಕ್ಕೆ ಮೂರು ಶರ್ತಗಳಿವೆ ಎಂದು ನೆನಪಿಡಬೇಕು. ಕೇವಲ **ತೌಬ** ಉಚ್ಚರಿಸಿದರೆ ಸಾಕಾಗಲಾರದು. ಸತ್ಯವಾಗಿ **ತೌಬ** ಮಾಡಬೇಕು. ಅದನ್ನು **'ತೌಬತುನ್ನಸೂಹ್'** ಎಂದು ಹೇಳುತ್ತಾರೆ. **ತೌಬ**ದ ಮೂರು ಶರ್ತಗಳು ಹೀಗಿವೆ. ಮೊದಲನೆ ಶರ್ತ, ಕೆಟ್ಟ ಕೆಲಸಗಳನ್ನು ಪ್ರೇರೇಪಿಸುವ ಯೋಚನೆಗಳನ್ನು ದೂರ ಸರಿಸಬೇಕು. ಎರಡನೆಯ ಶರ್ತ, ಮಾಡಿದ ಕೆಟ್ಟ ಕೆಲಸಗಳ ಬಗ್ಗೆ ಲಜ್ಜಿತನಾಗಬೇಕು ಮತ್ತು ಲಜ್ಜೆಯನ್ನು ಪ್ರಕಟಿಸಬೇಕು. ಪ್ರತಿಯೊಬ್ಬ ಮನುಷ್ಯನ ಮನಸಾಕ್ಷಿ ಎಂತಹ ಶಕ್ತಿ ಹೊಂದಿದೆ ಎಂದರೆ ಅದು ಪ್ರತಿಯೊಂದು ಕೆಟ್ಟ ಕೆಲಸದ ಬಗ್ಗೆ ಎಚ್ಚರಿಕೆ ನೀಡುತ್ತದೆ. ಆದರೆ ದುರದೃಷ್ಟಶಾಲಿ ಮನುಷ್ಯ ಅದನ್ನು ನಿಷ್ಕ್ರಿಯಗೊಳಿಸುತ್ತಾನೆ. ಆದುದರಿಂದ ಕೆಟ್ಟ ಕೆಲಸದ ಬಗ್ಗೆ ಪಶ್ಚಾತ್ತಾಪ ಪಡಬೇಕು. ಅವುಗಳಿಂದ ಸಿಗುವ ಆನಂದ ತಾತ್ಕಾಲಿಕವೆಂದೂ ಕೆಲವೇ ದಿನಗಳದ್ದೆಂದೂ ಮತ್ತು ಪ್ರತಿ ಸಾರಿ ಮೊದಲಿಗಿಂತ ಕಡಿಮೆ ಸುಖ ಸಿಗುತ್ತದೆಂದೂ ಯೋಚಿಸಬೇಕು. ಮೂರನೆಯ ಶರ್ತ, ಇನ್ನು ಮುಂದೆ ಆ ಕೆಟ್ಟ ಕೆಲಸ ಮಾಡುವುದಿಲ್ಲ ಎಂದು ದೃಢ ನಿರ್ಧಾರ ಮಾಡುವುದಾಗಿದೆ.

ಅನಂತರ ತನ್ನ ಸ್ಥಿತಿಯನ್ನು ಹೀಗೆಯೇ ಮುಂದುವರಿಸಿದರೆ ಅವನಿಂದ ಎಲ್ಲಾ ಕೆಡುಕುಗಳು ಅಳಿಸಿ ಹೋಗುವುವು ಅವನು ಸದ್ಗುಣ ಶಾಲಿಯಾಗುವನು. ಅವನಿಗೆ ಶಕ್ತಿ ನೀಡುವುದು ಅಲ್ಲಾಹನ ಕೆಲಸವಾಗಿದೆ. ಅಲ್ಲಾಹನೇ ಎಲ್ಲಾ ಶಕ್ತಿಗಳ ಮಾಲಿಕನಾಗಿದ್ದಾನೆ. ಅವನು ಹೇಳಿದ್ದಾನೆ: **ಅಲ್ ಖುವ್ವತುಲಿಲ್ಲಾಹಿ ಜಮೀಆ** ಎಲ್ಲಾ ಶಕ್ತಿ ಸಾಮರ್ಥ್ಯಗಳು ಅಲ್ಲಾಹನಿಗೆ ಸೇರಿವೆ ಮನುಷ್ಯನು ಬಲಹೀನನಾಗಿದ್ದಾನೆ. ಅಲ್ಲಾಹನೇ ಹೇಳಿದ್ದಾನೆ– **ಖುಲಿಖಲ್ ಇನ್‌ಸಾನ ಲಯೀಫ** 'ಮನುಷ್ಯನನ್ನು ಬಲಹೀನನಾಗಿ ಸೃಷ್ಟಿಸಲಾಗಿದೆ' ಎಂದು. ಒಟ್ಟಿನಲ್ಲಿ, ಅಲ್ಲಾಹನಿಂದ ಶಕ್ತಿಯನ್ನು ಪಡೆಯಲು ಮೇಲೆ ವಿವರಿಸಿದ ಮೂರು ಶರ್ತಗಳನ್ನು ಪೂರ್ಣವಾಗಿ ಪಾಲಿಸಬೇಕು. ಉದಾಸೀನತೆಯನ್ನು ಬಿಟ್ಟು ಬಿಡಬೇಕು. ಅಲ್ಲಾಹನನ್ನು ದೃಢ ನಿಶ್ಚಯದಿಂದ ಪ್ರಾರ್ಥಿಸಬೇಕು. ಆಗ ಅಲ್ಲಾಹನು ಮನುಷ್ಯನ ಸ್ವಭಾವಗುಣಗಳನ್ನು ಉತ್ತಮವಾಗಿ ಬದಲಾಯಿಸುವನು"

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: "ನೀವು ನಿಮ್ಮ ವರ್ತನೆಗಳನ್ನು ಶುದ್ಧೀಕರಿಸಿರಿ. ಯಾವಾಗಲೂ ಅಲ್ಲಾಹನನ್ನು ಸ್ಮರಿಸಿರಿ. ನಿರ್ಲಕ್ಷ್ಯ ಹೊಂದಬೇಡಿರಿ. ಓಡುತ್ತಿರುವ ಬೇಟೆಯಾಡಲ್ಪಡುವ ಮೃಗ ಸ್ವಲ್ಪ ಮಾತ್ರ ಉದಾಸೀನತೆ ತೋರಿಸಿದರೆ ಬೇಟೆಗಾರನಿಗೆ ಬಲಿಯಾಗುವ ಹಾಗೆ ಅಲ್ಲಾಹನ ಸ್ಮರಣೆಯ ಬಗ್ಗೆ ನಿರ್ಲಕ್ಷ್ಯನಾಗಿರುವವನು ಶೈತಾನನ ಕೈವಶವಾಗುತ್ತಾನೆ. ಯಾವಾಗಲೂ **ತೌಬ**ವನ್ನು ಜೀವಂತವಾಗಿಡಿರಿ. ಅದನ್ನು ಸಾಯಲು ಬಿಡಬೇಡಿರಿ. ಯಾಕೆಂದರೆ, ಶರೀರದ ಯಾವುದಾದರು ಒಂದು ಅಂಗದಿಂದ ಕೆಲಸ ಮಾಡಿಸಿದರೆ ಆ ಅಂಗ ಕಾರ್ಯ ಕ್ಷಮತೆ ಹೊಂದುತ್ತದೆ. ಅದನ್ನು ಕೆಲಸ ಮಾಡಿಸದೆ ಹಾಗೇ ಬಿಟ್ಟರೆ ಅದು ನಿರರ್ಥಕವಾಗಿಬಿಡುತ್ತದೆ. ಆದುದರಿಂದ **ತೌಬ**ವನ್ನು ಚೇತನಮಯವಾಗಿರಿಸಿರಿ. ಅದನ್ನು ನಿರ್ಲಕ್ಷಿಸಬೇಡಿರಿ. ನೀವು ಸತ್ಯವಾದ **ತೌಬ** ಮಾಡದಿದ್ದರೆ ಅದು ಕಲ್ಲಿನ ಮೇಲೆ ಬಿತ್ತಿದ ಬೀಜದ ಹಾಗೆ ಆಗುವುದು. ಸತ್ಯವಾದ **ತೌಬ** ಉತ್ತಮ ಜಮೀನಿನಲ್ಲಿ ಬಿತ್ತಿದ ಬೀಜದ ಹಾಗೆ ಇರುವುದು. ಅದು ಸರಿಯಾದ ಸಮಯದಲ್ಲಿ ಬೆಳೆದು ಫಲ ನೀಡುವುದು. ಇಂದಿನ ಕಾಲದಲ್ಲಿ

ಇಂತಹ **ತೌಬ** ಮಾಡುವುದು ಬಹಳ ಕಷ್ಟಕರವಾಗಿದೆ. ಏಕೆಂದರೆ ಲೌಕಿಕ ಲಾಲಸೆಗಳು ಮತ್ತು ಲೌಕಿಕ ರುಚಿ ಜನರ ಮುಂದೆ ಇರುತ್ತವೆ.''

''ನಾವು ಜಯಶಾಲಿಗಳಾಗಲು ನಮಗಿರುವ ಆಯುಧ **ಇಸ್ತಿಗ್‌ಫಾರ್, ತೌಬ** ಮತ್ತು ಧರ್ಮಜ್ಞಾನ ಗಳಿಸಿ ಅಲ್ಲಾಹನ ಮಹೋನ್ನತ ಸ್ಥಾನವನ್ನು ನೆನಪಿನಲ್ಲಿಡುವುದಾಗಿದೆ. ಐದು ಹೊತ್ತು ನಮಾಝ್ ನಿಷ್ಠೆಯಿಂದ ಅನುಷ್ಠಿಸುವುದಾಗಿದೆ. ನಮಾಝ್ ಎಂಬುದು ಪ್ರಾರ್ಥನೆಗಳು ಅಂಗೀಕರಿಸಲಿರುವ ಕೀಲಿಕೈಗಳಾಗಿವೆ. ಆದುದರಿಂದ ನಮಾಝ್ ಮಾಡುವಾಗ ದುಆ ಮಾಡಿರಿ. ಅದರ ಬಗ್ಗೆ ನಿರ್ಲಕ್ಷ್ಯರಾಗಬೇಡಿರಿ. **ಹುಖೂಖುಲ್ಲಾಹ್** ಮತ್ತು **ಹುಖೂಖುಲ್ ಇಬಾದ್**‌ಗೆ ಸಂಬಂಧಿಸಿದ ಎಲ್ಲಾ ಕೆಟ್ಟ ಕೆಲಸಗಳಿಂದ ರಕ್ಷಣೆ ಪಡೆಯಿರಿ.''

ನಾವು ಸತ್ಯವಾಗಿ **ತೌಬ** ಮಾಡುವವರಾಗುವ ಭಾಗ್ಯ ಅಲ್ಲಾಹನು ನಮಗೆ ದಯಪಾಲಿಸಲಿ. ನಾವು ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರರಾಗಿ ಯಾವಾಗಲೂ ಇರುವಂತಾಗಲಿ. ರಮಝಾನಿಗೆ ಸಂಬಂಧಿಸಿದ ಎಲ್ಲಾ ಅನುಗ್ರಹಗಳನ್ನು ನಾವು ಗಳಿಸುವಂತೆ ಅಲ್ಲಾಹನು ನಮ್ಮನ್ನು ಮಾಡಲಿ.

ಜುಮುಅ ನಮಾಝ್ ನಂತರ ಮೂರು ಜನಾಝ ಗಾಯಿಬ್ ನಮಾಝ್ ಅನುಷ್ಠಿಸಲಾಗುವುದು. ಒಂದನೆಯದು: **ಮುಹಮ್ಮದ್ ಇಮ್ತಿಯಾಝ್ ಅಹ್ಮದ್ ಸಾಹಿಬ್ ಇಬ್ನು ಮುಶ್ತಾಖ್ ಅಹ್ಮದ್ ತಾಹಿರ್** ಅವರದಾಗಿದೆ. ಪಾಕಿಸ್ತಾನದ ನವಾಬ್‌ಶಾ ನಿವಾಸಿಯಾದ ಅವರನ್ನು ಜುಲಾಯಿ 14ರಂದು ಶಹೀದರನ್ನಾಗಿ ಮಾಡಲಾಯಿತು, **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಎರಡನೆಯ ಜನಾಝ: **ನಸೀರ್ ಅಹ್ಮದ್ ಅಂಜುಮ್ ಸಾಹಿಬ್** ಅವರದ್ದು ಅವರು ರಬ್ವದ ಜಾಮಿಅ ಅಹ್ಮದಿಯದ ಉಸ್ತಾದರಾಗಿದ್ದರು. ಮೂರನೆಯ ಜನಾಝ: **ಸಾಹಿಬ್‌ಝಾದ ಮಿರ್ಝಾ ಅನ್ವರ್ ಅಹ್ಮದ್ ಸಾಹಿಬ್** ಅವರದ್ದಾಗಿದೆ. ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರ ಪುತ್ರರಾದ ಅವರು ಕಳೆದ ಸೋಮವಾರ ನಿಧನ ಹೊಂದಿದರು (**ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**).

--------------*****--------------

*Friday Sermon delivered by Hadrath Khaleefatul Masih Al Khamis(atba)*
*at Masjid Baithul Futhuh, London on 18-07-2014*
***Kannada Translation:*** M Ubeidullah
***Reviewed by:*** M P Ibrahim | ***Typing:*** U Basheer Ahmad
*Published By: **Kannada Khutuba Desk*** (comes under the **Kannada Isha'at Team**)
*Ahmadiyya Muslim Jama`at, Karnataka*
*Email*: **khutuba.kannada@gmail.com**